ಸಾಂತ್ವನವನ್ನೂ ಕೊಟ್ಟು ನಾವು ಮೇಲೇಳಲು ಸಹಾಯಕನಾದ. ಅಮ್ಮ ಮತ್ತು ತಂಗಿ ಹುಬ್ಬಳ್ಳಿಯಲ್ಲೇ ಇದ್ದರೂ ನಾನು ಬೆಳಗಾವಿಯಲ್ಲಿ ಮಾಮನ ಮನೆಯಲ್ಲಿದ್ದು ಎಂಜಿನಿಯರಿಂಗ್ ಕಲಿತೆ. ಇದೇ ಜಿ.ಐ.ಟಿ. ಕಾಲೇಜಿನಲ್ಲಿ. ಹೀಗಾಗಿ ಮಾಮಾ, ಮಾಮಿಯ ಜೊತೆಯಲ್ಲಿ ಅವಿನಾಭಾವದ ಸಂಬಂಧ ಬೆಳೆಯಿತು. ಪುಟ್ಟ ಸಂಧ್ಯಾ ಕೂಡ ನನ್ನನ್ನು ಬಹಳವಾಗಿ ಹಚ್ಚಿಕೊಂಡಳು. ನನ್ನ ತಂಗಿಯ ಮದುವೆಯೂ ಅವನ ಮುಂದಾಳ್ತನದಲ್ಲೇ ನಡೆಯಿತು. ನನ್ನ ಮದುವೆಯಲ್ಲೂ ಅವರೇ ಓಡಾಡಿದ್ದು. ಅದಕ್ಕೆಂದೋ ಏನೋ, ಗಂಡು ಮಕ್ಕಳಿಲ್ಲದ ಅವರ ಜೀವನದಲ್ಲಿ ನಿರ್ಣಾಯಕ ಸಂದರ್ಭಗಳಲ್ಲಿ ನನ್ನ ಪಾತ್ರ ಪ್ರಮುಖವಾಗಿತ್ತು. ಈ ಸಮಯದಲ್ಲಿ ಹೋಗುವದು ಅನಿವಾರ್ಯವಾಗಿತ್ತು. ಆದರೆ ಹೇಗೆ? ಕಂಪ್ಯೂಟರ್‌ನಲ್ಲಿ ಒಮ್ಮೆ ತಡಕಾಡಿದೆ. ಬರುವಾಗ ಸಿಗುವ ಸಾಧ್ಯತೆ ಇತ್ತು. ಹೋಗುವಾಗ ಮಾತ್ರ ಎಲ್ಲಾ ರೈಲುಗಳೂ ತುಂಬಿ ತುಳುಕುತ್ತ ವೇಟಿಂಗ್ ಲಿಸ್ಟನಲ್ಲಿ 'ನೂರು, ನೂರಾ ಒಂದು' ತೋರಿಸುತ್ತಿದ್ದವು. ಹತಾಶನಾದೆ. ಕಾರು ಅಷ್ಟು ದೂರ ನಾನೊಬ್ಬನೇ ತೆಗೆದುಕೊಂಡು ಹೋಗಿದ್ದಿಲ್ಲ. ಅಷ್ಟು ದೂರ ಹೊಡೆದೇ ಇಲ್ಲ. ಡ್ರೈವರ್‌ನನ್ನು ಕರೆದೊಯ್ಯಲೇ... ಎಂದು ಯೋಚಿಸುತ್ತಿರುವಾಗಲೇ ಶಿಷ್ಯ ಸಿಹಿ ತುಂಬಿದ ಡಬ್ಬದೊಂದಿಗೆ ಒಳಗೆ ಬಂದಿದ್ದು.

"ಏನಪಾ, ಮದವಿ, ಗಿದವಿ ಏನರೆ ಫಿಕ್ಸ್ ಆತೇನು?" ಎಂದು ನಗುತ್ತ ಕೇಳಿದೆ. "ಛೆ! ಇಲ್ಲರೀ ಸರ್. ಹೊಸಾ ಕಾರ್ ತೊಗೊಂಡೆ. ನೀವು ಹೇಳಿಧಂಗ ಸ್ಯಾಂಟ್ರೋ ಮನಿ ಮುಂದ ಬಂದು ನಿಂತೈತಿ. ನಾಳೆ ಊರಿಗೆ ಹೋಗ್ಬೇಕಾಗೇತಿ. ದೇವರಿಗೂ ಹೋಗೂದೈತ್ರಿ. ಅದಕ್ಕ ಸೋಮಾರ, ಮಂಗಳಾರ ರಜಾ ಬೇಕಾಗಿತ್ರಿ" ಎಂದು ಹಲ್ಲು ಕಿರಿದ. "ಬುಧವಾರ ಪ್ರಾಜೆಕ್ಟಿನ ಡೆಲಿವರಿ ಅದಪಾ. ನೆನಪದಲಾ? ನಾನೂ ಊರಿಗ್ಹೋಗಿ ಸೋಮವಾರಾನ ಬರ್ಲಿಕ್ಕತ್ತೇನಿ" ಎಂದೆ. "ನೀವು ಚಿಂತಿ ಬಿಡ್ರಿ ಸರ್. ನಾ ಮಂಗಳಾರ ಸಂಜೀಮಟಾ ಇಲ್ಲಿರತೇನ್ರಿ" ಎಂದು ಆಶ್ವಾಸನೆ ನೀಡಿದ. ಜೊತೆಗೇ "ನೀವು ಯಾವೂರಿಗೆ ಹೊಂಟೀರಿ ಸರ್?" ಎಂಬ ಪ್ರಶ್ನೆ ತೂರಿ ಬಂದಿತ್ತು. "ನಾ ಬೆಳಗಾವಿಗೆ ಹೋಗಬೇಕಪಾ" ಎಂದೆ. "ಸರ್, ಹೊಸಾ ಗಾಡಿ ತೊಗೊಂಡ ನಾ ಒಬ್ಬಾಂವ ಖಾನಾಪುರಕ್ಕ ಹೋಗಾತೇನ್ರಿ. ನೀವೂ ನನ ಜೋಡಿ ಬಂದ ಬಿಡ್ರಿ. ಬ್ಯಾಸರ ಕಳೀತದ. ಇಬ್ಬರೂ ಸುದ್ದಿ ಸೂರ್ವ್ಯಾಡಕೋತ ಊರ ಮುಟಗೊಳ್ಳೂಣು. ನಾ ನಿಮ್ಮನ್ನ ಸಂಜೀಮಟಾ ಬೆಳಗಾವಿ ಮುಟ್ಟಸತೇನ್ರಿ" ಎಂದ. ನಾನೂ ಕೊಂಚ ಯೋಚಿಸಿದೆ. ಹೇಗೂ ರಿಸರ್ವೇಷನ್ ಸಿಗುತ್ತಿಲ್ಲ. ಮಾಮನಿಗೆ ಇಲ್ಲ ಎನ್ನುವ ಹಾಗಿಲ್ಲ. ಬೇರೆ ಉಪಾಯವಿಲ್ಲ. ತಿರುಗಿ ಬರುವಾಗ ರೈಲು ಮಾಡಿಸಿದರಾಯಿತು ಎಂದುಕೊಂಡು ಒಪ್ಪಿದೆ. ತಟ್ಟನೇ ಚಿಕ್ಕ ಮಕ್ಕಳಂತೆ ಜಿಗಿದು ಸಂತೋಷ ವ್ಯಕ್ತಪಡಿಸಿದವ, "ಹಂಗಾರ ನಾಳೆ ಮುಂಜಾನೆ ನಿಮ್ಮನಿ ಹಂತೇಕ ಸರ್ಕಲ್ ಐತಲ್ಲ ಅಲ್ಲಿಗೆ ಬರತೇನ್ರಿ. ತಯಾರಾಗಿರ್ರಿ" ಎನ್ನುತ್ತ ಸಣ್ಣಗೇ ಸಿಳ್ಳೆ ಹೊಡೆಯುತ್ತ ಹೊರಟು ಹೋದ. 'ನಮ್ಮನಿಗೇ ಬಂದ ಬಿಡು. ಟಿಫಿನ್ ಮಾಡಿಕೊಂಡು ಹೊಂಟರಾಯಿತು' ಎನ್ನುವ ಮಾತು ಗಂಟಲಲ್ಲೇ ಉಳಿಯಿತು. ಶಿಷ್ಯ ಆಗಲೇ ಚೇಂಬರ್ ದಾಟಿದ್ದ.

ಹೇಳಿದಂತೆ ಶಿಷ್ಯ ಸರ್ಕಲ್ಲಿನಲ್ಲಿ ಕಾದಿದ್ದ. ಜೊತೆಗೊಬ್ಬ ಸ್ನೇಹಿತ ಬೇರೆ. ನನಗೂ ಪರಿಚಯಿಸಿದ. "ಹೊಸಾ ಕಾರು ತೊಗೊಂಡು ಊರಿಗೆ ಹೊಂಟೇವಿ. ಸೀಟ ಖಾಲಿ ಐತಿ. ನೀನೂ ಬಾರೋ ದೋಸ್ತ" ಎಂದು ಆತ್ಮೀಯವಾಗಿ ಕರೆದ. "ಇಲ್ಲೋ ಮಾರಾಯಾ. ನಮ್ಮನಿ ಕಥಿ ನಿನಗ್ಗೊತ್ತೈತಲಾ. ಕಥಿ ಹೋಗಿ ಕಾದಂಬರಿ ಆಗಾಕತ್ತೈತಿ. ಅದನ್ನ ಶನಿವಾರ, ಆಯಿತಾರ(ಭಾನುವಾರ) ಅನ್ನೋದರಾಗ ಸಮಾ ಮಾಡಾಕ ಬೇಕ. ನೀವ ಹೋಗಿಬರ್ರಿ"